# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 22/2021**

**ದೋ.ಸಾ. : 10 ಫ್ರಾ.ಸಾ. : 03**

| | | |
|---|---|---|
| ಸಾಕ್ಷಿಯ ಹೆಸರು | : | ಮಹ್ಮದ್ ಅಜುರುದ್ದಿನ್ ಅಲಿ ಸಾಬ್ ಶೇಖ್ |
| ತಂದೆಯ ಹೆಸರು | : | ಅಲಿ ಸಾಬ್ ಶೇಖ್ |
| ವಯಸ್ಸು | : | 35 ವರ್ಷ |
| ಕೆಲಸ | : | ಆಟೋ ಚಾಲಕ ಮತ್ತು ಪೋಟೊಗ್ರಾಫರ್ |
| ವಾಸ | : | ಜನತಾ ಕಾಲೋನಿ, ಚಂದಾವರ, ತಾಃ ಹೊನ್ನಾವರ |

**ದಿನಾಂಕಃ 12-09-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ನಾನು ವೃತ್ತಿಯಲ್ಲಿ ಆಟೋ ಚಾಲಕನಾಗಿರುತ್ತೇನೆ ಹಾಗೂ ಪೋಟೊಗ್ರಾಪರ್ ಆಗಿರುತ್ತೇನೆ. ಯಾವುದಾದರೂ ಕಾರ್ಯಕ್ರಮಗಳಿಗೆ ಪೋಟೋ ತೆಗೆಯಲು ಹಾಗೂ ವಿಡಿಯೋ ಮಾಡಲು ಯಾರಾದರೂ ಕರೆದರೆ ಹೋಗುತ್ತೇನೆ ಹಾಗೂ ಬಿಡುವಿನ ಸಮಯದಲ್ಲಿ ಆಟೋ ಚಾಲನೆ ಮಾಡುತ್ತೇನೆ ಮತ್ತು ನಾವು ಚಂದಾವರದ ಜನತಾ ಕಾಲೋನಿಯಲ್ಲಿ ವಾಸ ಮಾಡುತ್ತೇವೆ. ಚಾಸಾ-15 ನನ್ನ ಹೆಂಡತಿ. ಚಾಸಾ-14 ನನ್ನ ಹೆಂಡತಿಯ ಚಿಕ್ಕಮ್ಮ, ಅವರು ನಮ್ಮ ಮನೆಯಿಂದ 5 ಮನೆಗಳ ನಂತರದಲ್ಲಿ ವಾಸವಾಗಿರುತ್ತಾರೆ. ಮೃತ ಅಬುತಾಲೀಬ್ ನನಗೆ ಗೊತ್ತು, ಚಾಸಾ-1 ಆತನ ಹೆಂಡತಿ, ಅವರು ಸಹ ನಮ್ಮ ಮನೆಯ ಪಕ್ಕದ ಓಣಿಯಲ್ಲಿ ವಾಸವಾಗಿರುತ್ತಾರೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತು, ಆತನ ಮನೆ ಚಾಸಾ-14 ರವರ ಮನೆಯ ಪಕ್ಕದಲ್ಲಿರುತ್ತದೆ. ನಮಗೆ ನೀರಿನ ಸಮಸ್ಯೆಯಿದ್ದಾಗ, ನಾವು ಮತ್ತು ನಮ್ಮ ಓಣಿಯ ಜನರು ಚಾಸಾ-14 ರವರ ಮನೆಯಲ್ಲಿದ್ದ ಬಾವಿಯಿಂದ ನೀರು ತರಲು ಹೋಗುತ್ತಿದ್ದೇವು, ಅಲ್ಲಿಯೇ ಬಟ್ಟೆಗಳನ್ನು ತೊಳೆಯುತ್ತಿದ್ದೇವು ಹಾಗೂ ಸ್ನಾನ ಮಾಡುತ್ತಿದ್ದೇವು.

2. ಮೃತ ಅಬುತಾಲೀಬ್ ನ ಕೊಲೆಯಾಗುವ 13 ದಿನಗಳ ಮುಂಚೆ ಚಾಸಾ-14 ರವರ ಮನೆಯ ಹಿಂದುಗಡೆ ಸಿಮೆಂಟ್ ರಸ್ತೆಯ ನಿರ್ಮಾಣ ಕಾರ್ಯ ನಡೆಯುತ್ತಿದ್ದು, ಅಲ್ಲಿ ಚಾಸಾ-

14 ರವರು ರಸ್ತೆ ಮಾಡುತ್ತಿದ್ದ ಕಾಂಟ್ರ್ಯಾಕ್ಟರವರೊಂದಿಗೆ ಮಾತನಾಡುತ್ತಿದ್ದಾಗ, ಆರೋಪಿ ಚಾಸಾ–14 ರವರೊಂದಿಗೆ ಜಗಳ ಮಾಡಿ, ಬೈದಿರುತ್ತಾನೆ. ಈ ಬಗ್ಗೆ ಚಾಸಾ–14 ರವರು ಪೋಲಿಸ್ ಠಾಣೆಗೆ ಹೋಗಿ ಆರೋಪಿಯ ವಿರುದ್ಧ ದೂರನ್ನು ನೀಡಿರುತ್ತಾರೆ. ಆದಾದ ನಂತರ ದಿಃ 03–05–2021 ರಂದು ಬೆಳಿಗ್ಗೆ 11–00 ಗಂಟೆಗೆ ನನ್ನ ಹೆಂಡತಿ ಚಾಸಾ–14 ರವರ ಮನೆಗೆ ಬಟ್ಟೆ ತೊಳೆಯಲು ಹೋಗಿದ್ದಳು, ಆ ಸಮಯದಲ್ಲಿ ನಾನು ಮನೆಯಲ್ಲಿದ್ದೆ. ಸುಮಾರು 11–30 ಗಂಟೆಗೆ ನನ್ನ ಹೆಂಡತಿ ಮನೆಗೆ ಬಂದು, "ಚಾಸಾ–14 ರವರ ಮನೆಯ ಕಂಪೌಂಡಿನಲ್ಲಿ ನಾನು ಬಟ್ಟೆ ತೊಳೆಯುತ್ತಿದ್ದಾಗ, ಆರೋಪಿ ಸಲೀಂ ಕಂಪೌಂಡ ಬಳಿ ಬಂದು, ತನ್ನ ಲುಂಗಿಯನ್ನು ಎತ್ತಿ, ಗುಪ್ತಾಂಗವನ್ನು ನನಗೆ ತೋರಿಸಿರುತ್ತಾನೆ ಹಾಗೂ ಅಸಭ್ಯವಾಗಿ ವರ್ತಿಸುತ್ತಾ, ಅಶ್ಲೀಲ ಪದಗಳನ್ನು ಬಳಸಿರುತ್ತಾನೆ" ಎಂದು ಹೇಳಿದಳು.

3. ಮೃತ ಅಬುತಾಲೀಬ್ ರವರು ನಮ್ಮ ಓಣಿಯ ಹಿರಿಯರಾಗಿದ್ದರಿಂದ, ನಾನು ಮತ್ತು ನನ್ನ ಹೆಂಡತಿ ಸುಮಾರು 12–45 ಗಂಟೆಗೆ ಅಬುತಾಲೀಬ್ ರವರ ಮನೆಗೆ ಹೋಗಿ, ಆರೋಪಿ ಮಾಡಿದ ಕೃತ್ಯವನ್ನು ವಿವರಿಸಿ, ಆರೋಪಿಗೆ ಬುದ್ದಿ ಮಾತು ಹೇಳುವಂತೆ ಕೇಳಿಕೊಂಡಿರುತ್ತೇವೆ. ಅದರಂತೆ ನಾನು ಮತ್ತು ನನ್ನ ಹೆಂಡತಿ ಹಾಗೂ ಅಬುತಾಲೀಬ್ ಮತ್ತು ಆತನ ಹೆಂಡತಿ–ಮಕ್ಕಳು ಆರೋಪಿಯನ್ನು ಕೇಳಲು ಹೋಗುತ್ತಿದ್ದಾಗ, ಆರೋಪಿ ನಮಾಜ್ ಗೆ ಹೋಗಲು ಬರುತ್ತಿದ್ದು, ಚಾಸಾ–14 ರವರ ಮನೆಯ ಮುಂದೆ ಎದುರಿಗೆ ಸಿಕ್ಕಿರುತ್ತಾನೆ. ಆಗ ಅಬುತಾಲೀಬ್ ರವರು ಆರೋಪಿಗೆ ಹೆಣ್ಣು ಮಕ್ಕಳೊಂದಿಗೆ ಯಾಕೆ ಈ ರೀತಿ ವರ್ತಿಸಿ, ತೊಂದರೆ ಕೊಡುತ್ತಿಯಾ ಹಾಗೂ ಅಂಜುಂ ರವರಿಗೆ ಸಹ ಯಾಕೆ ಈ ರೀತಿ ಮಾಡಿದೆ ಎಂದು ಕೇಳಿದರು. ಅದಕ್ಕೆ ಪ್ರತಿಯಾಗಿ ಆರೋಪಿ ಅಬುತಾಲೀಬ್ ರವರಿಗೆ "ನೀನು ಯಾರು ಕೇಳಲು, ರಾಂಡ್ ಕೆ ಬೇಟೆ, ಹೆಂಗಸರ ವಿಚಾರ ನಿನಗೆ ಯಾಕೆ, ಇದನ್ನೆಲ್ಲಾ ಕೇಳಲು ನಿನಗೆ ಯಾರು ಅಧಿಕಾರ ಕೊಟ್ಟರು" ಎಂದು ಹೇಳಿದ. ಆಗ ಅಬುತಾಲೀಬ್ ರವರು ಆರೋಪಿಗೆ "ನೀನು ಈ ರೀತಿ ಮತ್ತೊಮ್ಮೆ ಮಾಡಿದರೆ, ನಿನ್ನ ಮೇಲೆ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿ, ಜೈಲಿಗೆ ಕಳುಹಿಸುತ್ತೇನೆ " ಎಂದು ಎಚ್ಚರಿಕೆ ನೀಡಿದರು. ಆಗ ಆರೋಪಿ ತನ್ನ ಮನೆಗೆ ಹೋಗಿ, ಮನೆಯ ಒಳಗಿನಿಂದ ಚಾಕುವನ್ನು ಹಿಡಿದುಕೊಂಡು ಬಂದು, ನಿನ್ನನ್ನು ಕೊಲೆ ಮಾಡುತ್ತೇನೆ ಎಂದು ಹೇಳಿದಾಗ, ಅಲ್ಲಿಯೇ ಇದ್ದ ಚಾಸಾ–11 ಮತ್ತು 12 ರವರು ಆರೋಪಿಗೆ ಸಮಧಾನ ಮಾಡಲು ಮುಂದಾಗಿರುತ್ತಾರೆ. ಆದರೂ ಸಹ ಆರೋಪಿ ಅಬುತಾಲೀಬ್ ರವನ್ನು ಕೊಲೆ ಮಾಡುವುದಾಗಿ ಹೇಳಿ ಮುಂದೆ ಬಂದಾಗ, ಅಬುತಾಲೀಬ್ ರವರು ಅಲ್ಲಿಯೇ ಬಿದ್ದಿದ್ದ

ಅಡಿಕೆಯ ದಬ್ಬೆಯನ್ನು ತೆಗೆದುಕೊಂಡು, ಚಾಕು ಕೆಳಗೆ ಬೀಳಲೆಂದು ಆರೋಪಿ ಚಾಕು ಹಿಡಿದುಕೊಂಡಿದ್ದ ಕೈಗೆ ಹೊಡೆದರು, ಆಗ ಆರೋಪಿ ಅಬುತಾಲೀಬ್ ರವರಿಗೆ "ನಿನ್ನನ್ನು ಸಾಯಿಸುತ್ತೇನೆ" ಎಂದು ಹೇಳಿ, ತನ್ನ ಕೈಯಲ್ಲಿ ಹಿಡಿದಿದ್ದ ಚಾಕುವಿನಿಂದ ಅಬುತಾಲೀಬ್ ರವರ ಎದೆಗೆ ಚುಚ್ಚಿ, ಆ ನಂತರ ಚಾಕುವನ್ನು ಹಿಡಿದುಕೊಂಡು ಮನೆಯ ಕಡೆಗೆ ಹೋದ. ಆರೋಪಿ ಅಬುತಾಲೀಬ್ ರವರಿಗೆ ಚಾಕುವಿನಿಂದ ಚುಚ್ಚಿದ್ದರಿಂದ ಅಬುತಾಲೀಬ್ ರವರ ಎದೆಯಿಂದ ರಕ್ತ ಸ್ರಾವವಾಗಿ, ಅವರ ಮೈ ಮೇಲೆ ಹಾಗೂ ಆರೋಪಿಯ ಬಟ್ಟೆಗಳಿಗೆ ತಾಗಿರುತ್ತದೆ ಮತ್ತು ನೆಲದ ಮೇಲೂ ಸಹ ಬಿದ್ದಿರುತ್ತದೆ. ಆ ನಂತರ ಅಬುತಾಲೀಬ್ ರವರು 5 ಹೆಜ್ಜೆ ಮುಂದೆ ಬಂದು, ಕೆಳಗೆ ಬಿದ್ದರು. ಆಗ ಸಮಯ ಮದ್ಯಾಹ್ನ 01-15 ಗಂಟೆ ಆಗಿತ್ತು ಹಾಗೂ ಆ ವೇಳೆಯಲ್ಲಿ ನಾನು ಚಾಸಾ-14 ರವರ ಮನೆಯ ಕಂಪೌಂಡ ಬಳಿ ನಿಂತು ನನ್ನ ಬಳಿ ಇದ್ದ ರೆಡ್ ಮಿ ನೋಟ್-9 ಪ್ರೋ ಮೊಬೈಲ್ ನಿಂದ ಘಟನೆಯನ್ನು ವಿಡಿಯೋ ಮಾಡುತ್ತಿದ್ದೆ.

4. ಘಟನೆಯಾಗುವ ಕಾಲಕ್ಕೆ ಸ್ಥಳದಲ್ಲಿ ನಾನು, ನನ್ನ ಹೆಂಡತಿ, ಅಬುತಾಲೀಬ್ ರವರ ಹೆಂಡತಿ ಹಾಗೂ ಆತನ ಮಕ್ಕಳು ಮತ್ತು ಚಾಸಾ-10 ಮತ್ತು 11 ರವರು ಇದ್ದೆವು ಹಾಗೂ ಜಗಳವಾಗುತ್ತಿದ್ದನ್ನು ನೋಡಿ ಅಲ್ಲಿಗೆ ಚಾಸಾ-20, 21, 17, 23, 14, 22 ರವರು ಬಂದಿರುತ್ತಾರೆ. ಆರೋಪಿ ಅಬುತಾಲೀಬ್ ರವರಿಗೆ ಚಾಕುವಿನಿಂದ ಚುಚ್ಚಿದ ನಂತರ ಅಬುತಾಲೀಬ್ ರವನ್ನು ಆತನ ಹೆಂಡತಿ ಚಾಸಾ-1 ಮತ್ತು ಚಾಸಾ-14 ರವರು ಚಾಸಾ-16 ರವರ ಆಟೋದಲ್ಲಿ ಕುಮಟಾದ ಸರಕಾರಿ ಆಸ್ಪತೆಗೆ ಕರೆದುಕೊಂಡು ಹೋದರು. ಅಲ್ಲಿ ಆಸ್ಪತ್ರೆಯ ವೈದ್ಯರು ಅಬುತಾಲೀಬ್ ರವರನ್ನು ಪರೀಕ್ಷಿಸಿ, ಮೃತ ಪಟ್ಟಿರುತ್ತಾರೆಂದು ತಿಳಿಸಿದರು ಎಂದು ತಿಳಿದು ಬಂತು. ಈ ಘಟನೆಯನ್ನು ನೋಡಿದ ಬಗ್ಗೆ ದಿಃ 05-05-2021 ರಂದು ನಾನು ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

5. ಅದೇ ದಿನ ಪೋಲಿಸ್ ಠಾಣೆಯಲ್ಲಿ ಚಾಸಾ-5 ಮತ್ತು 8 ರವರ ಸಮಕ್ಷಮ ಪೋಲಿಸರು ನನ್ನ ಮೊಬೈಲ್ ನಲ್ಲಿದ್ದ ದೃಶ್ಯಾವಳಿಗಳನ್ನು ನೋಡಿ, ಪರಿಶೀಲಿಸಿ, ದೃಶ್ಯಾವಳಿಗಳ ಸ್ಕ್ರೀನ್ ಶಾಟ್ ಮಾಡಿ, ಅವುಗಳನ್ನು ಸಿಡಿಗೆ ವರ್ಗಾಯಿಸಿದರು ಮತ್ತು ಮೊಬೈಲ್ ಹಾಗೂ ಅದನ್ನು ಖರೀದಿಸಿದ ಬಿಲ್ ನ್ನು ನನ್ನಿಂದ ಪಡೆದುಕೊಂಡರು ಹಾಗೂ ಪೋಟೋ ತೆಗೆದರು ಮತ್ತು ನನ್ನ ಸಹಿಯನ್ನು ಪಡೆದುಕೊಂಡರು. ಸಾಕ್ಷಿಯು ಆ ದಿನ ಠಾಣೆಯಲ್ಲಿ ಸಹಿ ಮಾಡಿದ ದಾಖಲೆಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಮೊಬೈಲ್ ಜಪ್ತು ಪಂಚನಾಮೆಯಾಗಿದ್ದು, ಅದನ್ನು ನಿಪಿ-15 ಎಂದು, ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು.

ಪಂಚನಾಮೆಯ ಕಾಲಕ್ಕೆ ತೆಗೆದ ಪೋಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-16 ಎಂದು ಗುರುತಿಸಲಾಯಿತು. ಪೋಲಿಸರ ಮುಂದೆ ಹಾಜರುಪಡಿಸಿದ, ಮೊಬೈಲ್ ಖರೀದಿಸಿದ ರಶೀದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದುಸಿ ಅದನ್ನು ನಿಪಿ-17 ಎಂದು ಗುರುತಿಸಲಾಯಿತು. ಮೊಬೈಲ್ ಜಪ್ತು ಪಂಚನಾಮೆಯ ಕಾಲಕ್ಕೆ ಪೋಲಿಸರು ಮಾಡಿದ 4 ಪುಟಗಳ ಮೊಬೈಲ್ ಸ್ಕ್ರಿನ್ ಶಾಟ್ ಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-18 ರಿಂದ ನಿಪಿ-21 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ-18(ಎ) ದಿಂದ ನಿಪಿ-21(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ತನ್ನ ಮೊಬೈಲ್ ನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆ ಮಾಲು-11 ಎಂದು ಗುರುತಿಸಲಾಗಿರುತ್ತದೆ.

6. ಘಟನಾ ಸಮಯದಲ್ಲಿ ಆರೋಪಿತನು ನೀಲಿ ಬಣ್ಣದ ಅಂಗಿ ಹಾಗೂ ಬಿಳಿ ಬಣ್ಣದ ಲುಂಗಿಯನ್ನು ಧರಿಸಿದ್ದನು, ಅಬುತಾಲೀಬ್ ರವರು ಗುಲಾಬಿ ಬಣ್ಣದ ಅಂಗಿ ಮತ್ತು ಗುಲಾಬಿ ಬಣ್ಣದ ಲುಂಗಿಯನ್ನು ಧರಿಸಿದ್ದರು. ಸಾಕ್ಷಿ ತಾನು ಮಾಡಿದ ವಿಡಿಯೋವನ್ನು ಮುದ್ದೆ ಮಾಲು-11 ರಲ್ಲಿ ನೋಡಿ ಗುರುತಿಸಿದ್ದು, ಸದರಿ ವಿಡಿಯೋ 15 ಸೆಕೆಂಡ್ ಗಳ ಕಾಲದ ವಿಡಿಯೋ ಆಗಿರುತ್ತದೆ ಹಾಗೂ 83.79 ಎಂ.ಬಿ ಗಾತ್ರದ್ದಾಗಿರುತ್ತದೆ. ಸದರಿ ದೃಶ್ಯಾವಳಿಯಲ್ಲಿ ಆರೋಪಿಯು ತನ್ನ ಕೈಯಲ್ಲಿ ಚಾಕು ಹಿಡಿದುಕೊಂಡಿರುತ್ತಾನೆ ಹಾಗೂ ಅಬುತಾಲೀಬನ ಕೈಯಲ್ಲಿ ಒಂದು ಅಡಿಕೆ ಮರದ ದಬ್ಬೆಯನ್ನು ಹಿಡಿದುಕೊಂಡು, ಆರೋಪಿಯ ಕೈಗೆ ಹೊಡೆದಾಗ, ಆರೋಪಿ ತನ್ನ ಕೈಯಲ್ಲಿದ್ದ ಚಾಕುವಿನಿಂದ ಅಬುತಾಲೀಬನನ್ನು ಸಾಯಿಸಿಯೇ ಬಿಡುತ್ತೇನೆಂದು ಹೇಳುತ್ತಾ, ಆತನ ಎದೆಗೆ ಚಾಕುವಿನಿಂದ ಚುಚ್ಚಿರುತ್ತಾನೆ. ಸದರಿ ದೃಶ್ಯಾವಳಿಯನ್ನು ನ್ಯಾಯಾಲಯದಲ್ಲಿ ಪ್ಲೇ ಮಾಡಿ ನೋಡಲಾಗಿರುತ್ತದೆ ಹಾಗೂ ದೃಶ್ಯಾವಳಿಯಲ್ಲಿ ವಿಡಿಯೋ ಸ್ಪಷ್ಟವಾಗಿ ಕಾಣುತ್ತಿರುತ್ತದೆ ಹಾಗೂ ಶಬ್ದವು ಸ್ಪಷ್ಟವಾಗಿ ಕೇಳುತ್ತಿರುತ್ತದೆ ಮತ್ತು ದೃಶ್ಯಾವಳಿಯು ದಿಃ 03-05-2021 ರಂದು ಮದ್ಯಾಹ್ನ 13-14 ಗಂಟೆಗೆ ಎಂದು ಶೇಖರಣೆಗೊಂಡಿರುತ್ತದೆ. ನಾನು ಮೊಬೈಲ್ ನಲ್ಲಿ ಘಟನೆಯ ಧೃಶ್ಯಾವಳಿಯನ್ನು ಚಿತ್ರೀಕರಿಸಿದ ಬಗ್ಗೆ ಪೋಲಿಸರಿಗೆ ಕಲಂ 65(ಬಿ) ರ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-22 ಎಂದು, ಸಾಕ್ಷಿಯ ಸಹಿಯನ್ನು ನಿಪಿ-22(ಎ) ಎಂದು ಗುರುತಿಸಲಾಯಿತು. ಆರೋಪಿಯ ಅಬುತಾಲೀಬನನ್ನು ಕೊಲೆ ಮಾಡಲು ಬಳಸಿದ ಚಾಕುವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

7. ಘಟನೆಯ ದಿನ ಆರೋಪಿ ಧರಿಸಿದ್ದ ಶರ್ಟ್ ಮತ್ತು ಲುಂಗಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮುದ್ದೆ ಮಾಲು-1 ಮತ್ತು 3 ಎಂದು, ಆರೋಪಿಯು ಮೃತನನ್ನು ಕೊಲೆ ಮಾಡಲು ಉಪಯೋಗಿಸಿದ ಚಾಕುವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆ ಮಾಲು-2 ಎಂದು, ಅಬುತಾಲೀಬ್ ರವರು ಧರಿಸುತ್ತಿದ್ದ ಕನ್ನಡಕವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆ ಮಾಲು-5 ಎಂದು, ಅಬುತಾಲೀಬ್ ರವರ ಒಂದು ಚಪ್ಪಲಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆ ಮಾಲು-6 ಎಂದು, ಅಡಿಕೆ ಮರದ ಪಟ್ಟೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆ ಮಾಲು-7 ಎಂದು, ಅಬುತಾಲೀಬ್ ರವರು ಧರಿಸಿದ್ದ ಲುಂಗಿ, ಶರ್ಟ್, ನಿಕ್ಕರನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮುದ್ದೆ ಮಾಲು-8 ರಿಂದ 10 ಎಂದು ಗುರುತಿಸಲಾಗಿರುತ್ತದೆ. ದಿಃ 01-07-2021 ರಂದು ನಾನು ಹೊನ್ನಾವರದ ನ್ಯಾಯಾಲಯದಲ್ಲಿ ಹೇಳಿಕೆಯನ್ನು ನೀಡಿರುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಎಲ್.ಎ.ಡಿ.ಸಿ. ರವರಿಂದ.**

ಸಾಕ್ಷಿದಾರ 1, 10, 14 ರವರ ಮುಖ್ಯ ವಿಚಾರಣೆ ಆಗುವವರೆಗೆ ಸದರಿ ಸಾಕ್ಷಿಗಳ ಪಾಟೀ ಸವಾಲನ್ನು ಮುಂದೂಡುವಂತೆ ಆರೋಪಿ ಪರ ವಕೀಲರು ಸಿ.ಆರ್.ಪಿ.ಸಿ ಕಲಂ 231(2) ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯು ಪುರಸ್ಕಾರವಾಗಿರುವುದರಿಂದ, ಈ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ